ಸಿಸಿ ನಂ.*647/2017*

**ಪಿ.ಡಬ್ಲ್ಯೂ- *1***

**<u>ದಿಃ 28-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ ಆರ್ ಎಸ್ ವಕೀಲರಿಂದ</u>**

*2*ನೇ ಆರೋಪಿಯು ಸುಮಾರು *25* ವರ್ಷಗಳಿಂದ ಬಾವಿಕೆರೆಯ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕೆಲಸ ಮಾಡುತ್ತಿದ್ದಾರೆಂದರೆ ಸರಿ. ಸದರಿ ಸೊಸೈಟಿಯಲ್ಲಿ ಹಲವಾರು ಘಟಕಗಳು ಇವೆ ಎಂದರೆ ಸರಿ. ಎಸ್ ಹೆಚ್ ಜಿ ಎಂಬ ಘಟಕವು ಹೆಣ್ಣು ಮಕ್ಕಳಿಂದ ಹಣವನ್ನು ಪಿಗ್ಮಿ ರೀತಿಯಂತೆ ಸಂಗ್ರಹಿಸಿ ಹಣವನ್ನು ಬ್ಯಾಂಕಿಗೆ ಡಿಪಾಸಿಟ್ ಮಾಡುತ್ತಾರೆಂದರೆ ಸರಿ. ಸದರಿ ಸಂಘದಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಮೂರು ಜನ ಕೆಲಸ ಮಾಡುತ್ತಾರೆಂದು ನುಡಿಯುತ್ತಾರೆ. ಸದರಿಯವರನ್ನು ನಮ್ಮ ಸಂಘದ ಸಾಮಾನ್ಯ ಸಭೆಯಲ್ಲಿ ನಡವಳಿಕೆ ಮೂಲಕ ನೇಮಕ ಮಾಡಿಕೊಂಡಿರುತ್ತಾರೆಂದರೆ ಸರಿ. ಸದರಿ ಸಂಘದಲ್ಲಿ ಕೆಲಸ ಮಾಡುವ ವ್ಯಕ್ತಿಗಳಿಗೆ ಸಂಬಳ ನೀಡಬೇಕಾದರೂ ಸಹ ನಮ್ಮ ಸಂಘದ ಸಾಮಾನ್ಯ ಸಭೆಯಲ್ಲಿ ನಡವಳಿಕೆ ಮಾಡಿದ ನಂತರ ನೀಡುತ್ತೇವೆ ಎಂದರೆ ಸರಿ. *1*ನೇ ಆರೋಪಿಯು ಸದರಿ ಸಂಘದಲ್ಲಿ ಗೊಬ್ಬರವನ್ನು ಮಾರಾಟ ಮಾಡುವ ಮತ್ತು ಗೊಬ್ಬರ ಮಾರಾಟ ಮಾಡಿ ಬಂದ ಹಣವನ್ನು ಬ್ಯಾಂಕಿಗೆ ಪಾವತಿ ಮಾಡುವ ಹೊಣೆ *1*ನೇ ಆರೋಪಿಯದ್ದಾಗಿರುತ್ತದೆ. ಸದರಿ ಹಣವನ್ನು ಸಿಡಿಸಿಸಿ ಬ್ಯಾಂಕ್ ಲಕ್ಕವಳ್ಳಿ ಶಾಖೆಗೆ ಜಮಾ ಮಾಡುತ್ತಿದ್ದರು ಎಂದರೆ ಸರಿಯಲ್ಲ. *2*ನೇ ಆರೋಪಿಯ ಕೆಲಸ ರೈತರಿಗೆ ಸಾಲ ನೀಡುವುದು, ರೈತರಿಂದ ಸಾಲದ ಹಣವನ್ನು ವಸೂಲಿ ಮಾಡಿ ಸದರಿ ಹಣವನ್ನು ಬ್ಯಾಂಕಿಗೆ ಜಮಾ ಮಾಡುವುದು ಆತನ ಕೆಲಸವಾಗಿತ್ತು ಎಂದರೆ ಸರಿ.

*2010* ರಿಂದ *2012*ನೇ ಸಾಲಿನ ತನಕ ಬಾವಿಕೆರೆಯ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸೀತರಾಮ್ ರವರು ಅಧ್ಯಕ್ಷರಾಗಿದ್ದರು ಎಂದರೆ ಸರಿ. ಸೆಪ್ಟೆಂಬರ್ *2012*ನೇ ಇಸವಿಯಲ್ಲಿ ನಾನು ಸದರಿ ಸಂಘದ ಅಧ್ಯಕ್ಷನಾಗಿದ್ದೆ. ನಾನು ಸದರಿ ಸಂಘದಲ್ಲಿ ಸುಮಾರು ಒಂದೂವರೆ ವರ್ಷಗಳ ಕಾಲ ಅಧ್ಯಕ್ಷನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಕೃಷ್ಣಮೂರ್ತಿ ಎಂಬುವವರು ಆಹಾರ ಧಾನ್ಯಗಳ ಮಾರಾಟಗಾರರಾಗಿ ಸದರಿ ಸಂಘದಲ್ಲಿ ನೇಮಕವಾಗಿದ್ದರು ಎಂದರೆ ಸರಿ. ಶ್ರೀಕಾಂತ್ ಎಂಬುವವರು ಸದರಿ ಸಂಘದಲ್ಲಿ ಗುತ್ತಿಗೆ ಆಧಾರದ ಮೇಲೆ ಪಿಗ್ಮಿ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದರು. *1*ನೇ ಆರೋಪಿಯು ಬಾವಿಕೆರೆಯ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ *4,85,000/-* -ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ. ಕೃಷ್ಣಮೂರ್ತಿ ಎನ್ನುವವರು*-5,00,000/-*

ರೂಪಾಯಿ ಹಣವನ್ನು ಸದರಿ ಸಂಘದಲ್ಲಿ ದುರುಪಯೋಗ ಪಡಿಸಿಕೊಂಡಿರುತ್ತಾರೆ. ಶ್ರೀಕಾಂತ್ ಎಂಬುವವರು ಸದರಿ ಸಂಘದಲ್ಲಿ ಯಾವುದೇ ಹಣವನ್ನು ದುರಪಯೋಗ ಮಾಡಿಕೊಂಡಿಲ್ಲ. ಶ್ರೀಕಾಂತ್ ನ ವಿರುದ್ದ ಯಾವುದೇ ದೂರನ್ನು ನೀಡಿಲ್ಲ. ಸದರಿ ವಿಚಾರವಾಗಿ ನಾನು ಸಹಕಾರಿ ಸಂಘಗಳ ಸಹಾಯಕ ನಿರ್ದೇಶಕರು, ತರೀಕೆರೆಯವರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಶ್ರೀಕಾಂತ್ ರವರು ನನ್ನ ತಂದೆ ಕಡೆಯಿಂದ ಸಂಬಂಧಿಕರು. ಕೃಷ್ಣಮೂರ್ತಿ ಎಂಬುವವರು ***5,76,500/-*** ರೂಪಾಯಿಗಳನ್ನು ನಮ್ಮ ಸಂಘಕ್ಕೆ ಜಮಾ ಮಾಡಿರುತ್ತಾರೆಂದರೆ ಸರಿ.

ದಿಃ ***19-01-2013*** ರಂದು ***2*** ನೇ ಆರೋಪಿಯು ***1*** ನೇ ಆರೋಪಿಗೆ ಸಂಘದ ಹಣವಾದ ***2,76,000/-*** ರೂಪಾಯಿಗಳನ್ನು ತಮ್ಮ ಸ್ವಂತ ಉಪಯೋಗಕ್ಕೆ ಬಳಸಿಕೊಂಡಿದ್ದು, ಅದು ವಂಚನೆಯಾಗಿದ್ದು, ಸದರಿ ಹಣವನ್ನು ದಿಃ ***31-01-2013*** ರ ಅವಧಿಯ ಒಳಗೆ ದುರುಪಯೋಗಪಡಿಸಿಕೊಂಡ ಹಣವನ್ನು ಪೂರ್ತ ಪಾವತಿಸುವಂತೆ ನೋಟೀಸನ್ನು ಜಾರಿ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ನೋಟೀಸಿನ ಕಾಫಿಯನ್ನು ಸಹ ನನಗೆ ಕೊಟ್ಟಿರುತ್ತಾರೆಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***